ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರ ಹೆಸರು : ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶನ ಹೊಂದಿದವರು)

ಚುಕ್ಕೆಗುರುತಿನ ಪ್ರಶ್ನೆ ಸಂಖ್ಯೆ : 994

ಉತ್ತರಿಸಬೇಕಾದ ದಿನಾಂಕ : 10.03.2021.

ಉತ್ತರಿಸಬೇಕಾದ ಸಚಿವರು : ಮಾನ್ಯ ಪಶುಸಂಗೋಪನೆ ಸಚಿವರು.

ಕ್ರ.ಸಂ	ಪ್ರಶ್ನೆಗಳು	ಉತ್ತರಗಳು
ಅ	ರಾಜ್ಯದಲ್ಲಿ ಪ್ರಾಣಿಗಳಿಗಾಗಿ ಎಷ್ಟು ಆಂಬುಲೆನ್ಸ್ ವ್ಯವಸ್ಥೆ ಇದೆ: (ತಾಲ್ಲೂಕುವಾರು ವಿವರ ಒದಗಿಸುವುದು)	ಪಶು ಸಂಗೋಪನಾ ಇಲಾಖೆಯಲ್ಲಿ ಆಂಬುಲೆನ್ಸ್ ವ್ಯವಸ್ಥೆ ಇರುವುದಿಲ್ಲ.
ಆ	ಸದರಿ ಆಂಬುಲೆನ್ಸ್ ವ್ಯವಸ್ಥೆಯ ಪ್ರಯೋಜನವನ್ನು ಜನತೆ ಯಾವ ಪ್ರಮಾಣದಲ್ಲಿ ತಮ್ಮ ಪ್ರಾಣಿಗಳಿಗೆ ಬಳಸಿಕೊಳ್ಳುತ್ತಿದ್ದಾರೆ: (ತಾಲ್ಲೂಕುವಾರು ವಿವರ ಒದಗಿಸುವುದು)	ರಾಜ್ಯದಲ್ಲಿ ಸಾಕುಪ್ರಾಣಿಗಳಿಗಾಗಿ ಆಂಬುಲೆನ್ಸ್ ವ್ಯವಸ್ಥೆ ಇರುವುದಿಲ್ಲ ಆದರೆ 15 ಜಿಲ್ಲೆಗಳಲ್ಲಿ ಸುಸಜ್ಜಿತ ಚಿಕಿತ್ಸಾ ವಾಹನಗಳ ಮೂಲಕ (ಪಶು ಸಂಜೀವಿನಿ) ತಜ್ಞ ಪಶುವೈದ್ಯರ ಸೇವೆಯನ್ನು ಬಳಸಿಕೊಂಡು ಪಶುಪಾಲಕರ ಮನೆ ಬಾಗಿಲಲ್ಲಿ ಶಸ್ತ್ರಚಿಕಿತ್ಸೆ ಹಾಗೂ ವಿಶೇಷ ತುರ್ತು ಚಿಕಿತ್ಸೆ ನೀಡಲಾಗುತ್ತಿದೆ. ಸ್ಥಳೀಯ ಪಶುವೈದ್ಯರು ತಮ್ಮ ಹಂತದಲ್ಲಿ ಚಿಕಿತ್ಸೆ ನೀಡಲು ಕಷ್ಟವಾದ ಸಂದರ್ಭಗಳಲ್ಲಿ ಮತ್ತು ವಿಶೇಷ ಶಸ್ತ್ರಚಿಕಿತ್ಸೆ ನಡೆಸಬೇಕಾದ ಸಂದರ್ಭ ಬಂದಾಗ ಪಶು ಸಂಜೀವಿನಿ ಸೇವೆಯನ್ನು ಸಂಪರ್ಕಿಸಿ ಜಿಲ್ಲಾಮಟ್ಟದ ತಜ್ಞರ ಮೂಲಕ ಚಿಕಿತ್ಸೆ ನೀಡಲಾಗುತ್ತಿದೆ. ಪಶು ಸಂಜೀವಿನಿ ವಾಹನಗಳು ಜಿಲ್ಲಾ ಕೇಂದ್ರದಲ್ಲಿ ಸ್ಥಾಪನೆಗೊಂಡಿದ್ದು, ಸ್ಥಳೀಯ ಪಶುವೈದ್ಯರ ಬೇಡಿಕೆಯನುಸಾರ ಇಡೀ ಜಿಲ್ಲೆಗೆ ಸೇವೆ ನೀಡುತ್ತಿವೆ. ಜಿಲ್ಲಾವಾರು ಚಿಕಿತ್ಸೆ ನೀಡಿದ ಮಾಹಿತಿಯನ್ನು **ಅನುಬಂಧ–1 ರಲ್ಲಿ** ನೀಡಿದೆ.
ಇ	ಸದರಿ ಆಂಬುಲೆನ್ಸ್ ವ್ಯವಸ್ಥೆಯನ್ನು ಸರ್ಕಾರ ಹೊಂದಿರುವುದು ಸಾಮಾನ್ಯ ಜನತೆಗೆ ತಿಳಿದಿದೆಯೇ: ಇಲ್ಲಿದಿದ್ದಲ್ಲಿ ವ್ಯಾಪಕ ಪ್ರಚಾರ ನೀಡಲು ಸರ್ಕಾರದ ಕ್ರಮಗಳೇನು?	ಪಶು ಸಂಗೋಪನಾ ಇಲಾಖೆಯಲ್ಲಿ ಆಂಬುಲೆನ್ಸ್ ವ್ಯವಸ್ಥೆ ಇರುವುದಿಲ್ಲ. ಆದರೆ, ಪಶು ಸಂಜೀವಿನಿ ಸೇವೆಗೆ ಮಾಧ್ಯಮಗಳ ಮೂಲಕ ವ್ಯಾಪಕ ಪ್ರಚಾರ ನೀಡಲಾಗಿರುತ್ತದೆ. ತಜ್ಞ ಪಶುವೈದ್ಯಕೀಯ ಸೇವೆಯನ್ನು ಪಶುಪಾಲಕರ ಸಹಾಯವಾಣಿ ಸಂಖ್ಯೆ:1962 ರೊಂದಿಗೆ ಸಂಯೋಜಿಸಿ ಸೇವೆಯನ್ನು ಒದಗಿಸಲಾಗುತ್ತಿದೆ ಹಾಗೂ ರಾಜ್ಯದ ಎಲ್ಲಾ ಪಶುವೈದ್ಯಕೀಯ ಸಂಸ್ಥೆಗಳಲ್ಲಿ ಮಾಹಿತಿಯನ್ನು ಪ್ರದರ್ಶಿಸಲು ಸೂಚಿಸಲಾಗಿದೆ

ಪಸಂಮೀ ಇ–74 ಸಲೆವಿ 2021

ಪ್ರಭು ಬಿ. ಚೌವ್ಹಾಣ್
ಪಶುಸಂಗೋಪನೆ ಸಚಿವರು

ಅನುಬಂಧ-1

ಪಶು ಸಂಜೀವಿನಿ ವಾಹನದ ಮೂಲಕ ಚಿಕಿತ್ಸೆ ನೀಡಿದ ಜಿಲ್ಲಾವಾರು ಮಾಹಿತಿ

ಕ್ರ ಸಂ.	ಜಿಲ್ಲೆಯ ಹೆಸರು	ಚಿಕಿತ್ಸೆಗೆ ತೆರಳಿದ ಗ್ರಾಮಗಳ ಸಂಖ್ಯೆ	ಪಶು ಚಿಕಿತ್ಸೆ ಮತ್ತು ತುರ್ತು ಚಿಕಿತ್ಸೆ ನೀಡಲಾದ ಜಾನುವಾರುಗಳ ಸಂಖ್ಯೆ
1	ಮೈಸೂರು	22	30
2	ಮಂಡ್ಯ	16	28
3	ಶಿವಮೊಗ್ಗ	24	32
4	ಚಿತ್ರದುರ್ಗ	37	49
5	ತುಮಕೂರು	33	62
6	ಚಿಕ್ಕಬಳ್ಳಾಪುರ	17	15
7	ಹಾಸನ,	83	179
8	ವಿಜಯಪುರ	11	28
9	ಧಾರವಾಡ	14	44
10	ಬೀದರ್	19	36
11	ಬೆಳಗಾವಿ	19	25
12	ರಾಯಚೂರು	14	14
13	ಕಲಬುರ್ಗಿ	2	6
14	ದಕ್ಷಿಣ ಕನ್ನಡ	23	292
15	ಯಾದಗಿರಿ	12	12